ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ಬಹಳಷ್ಟು ವಿರೋಧ ಮಾಡಬೇಕೆಂದ್ದು ನನ್ನ ಇಚ್ಛೆ ಇದೆ. ಅದು ಏನಾಗಿದೆ ಎಂದರೆ ಮಾನ್ಯ ಉಪಮುಖ್ಯ ಮಂತ್ರಿಯವರು, ಉಪಮುಖ್ಯಮಂತ್ರಿಗಳಾದ ಮೇಲೆ ಮೊದಲನೇ ಬಾರಿಗೆ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡುತ್ತಿದ್ದಾರೆ. ಹಾಗಾಗಿ ಇದನ್ನು ವಿರೋಧ ಮಾಡುವುದು ಸರಿಯಲ್ಲ. ಆದ್ದರಿಂದ ವಿರೋಧ ಮಾಡದೆ ಸ್ವಾಗತ ಮಾಡುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ವಿರೋಧ ಪಕ್ಷದ ನಾಯಕರ ಮಾತನ್ನು ನಾನು ಅನುಮೋದನೆ ಮಾಡುತ್ತಿದ್ದೇನೆ. ಏತಕ್ಕೆಂದರೆ ಅವರು ತಂದಿರುವ ಮೊದಲ ಬಿಲ್ಲನ್ನು ವಿರೋಧ ಮಾಡಬಾರದು.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1993ನೇ ಸಾಲಿನ ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 4ರವರೆಗೆ:

ಉಪಾಧ್ಯಕ್ಷರು : "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4 ರವರಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : 'ಪ್ರಸ್ತಾಪ ಏನೆಂದರೆ ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

(ಪ್ರಸ್ತಾವದ ಅಂಗೀಕಾರ)

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು)-1993ನೇ ಸಾಲಿನ ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1993ನೇ ಸಾಲಿನ ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಇಬ್ಬರನ್ನು ಬಹಳ ದಿವಸಕ್ಕೆ ಇವತ್ತು ನೋಡುತ್ತಿದ್ದೇವೆ. ಇವತ್ತು ಮಧ್ಯಾಹ್ನ ತಮ್ಮದೇ ಪಾತ್ರಗಳು. ಆದ್ದರಿಂದ ದಯವಿಟ್ಟು ಮಧ್ಯಾಹ್ನ ತಾವು ಇರಬೇಕು. ಕೆ.ಇ.ಬಿ.ಬಗ್ಗೆ 2-3 ವಿಷಯಗಳಿವೆ. ಮಾನ್ಯ ಮುಖ್ಯಮಂತ್ರಿಗಳನ್ನು ಸಹ ರಿಕ್ವೆಸ್ಟ್ ಮಾಡುತ್ತಿದ್ದೇನೆ. ತಾವು ಸಹ ಇರಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ. ರೈತರ ಬಗ್ಗೆ, ಆಶ್ರಯದ ಬಗ್ಗೆ ಮತ್ತು ಭಟ್ಕಳ ಬಗ್ಗೆ ಮತ್ತು ಕನ್ನಡವನ್ನು ಜಾರಿಗೆ ತರುವ ಬಗ್ಗೆ ವಿನಂತಿ ಇದೆ. ತಮ್ಮ ಕಡೆ ಈಗ ಒಂದು ಇಂಟೀರಿಯಮ್ ರಿಪೋರ್ಟ್ ಬಂದಿದೆ. ಕೆ.ಇ.ಬಿ. ಬಗ್ಗೆ ಮತ್ತು ವರಾಹಿ ಬಗ್ಗೆ ಮುಂಚಾನೆ ಪ್ರಸ್ತಾಪ ಮಾಡಿದ್ದೇನೆ. ಅಲ್ಲಿ ಡ್ಯಾಮ್ ಕೊಲಾಪ್ಸ್ ಆಗಬಹುದು. ಅದರ ಬಗ್ಗೆ ತಾವು ಹೇಳಿಕೆ ನೀಡಬೇಕು ಮತ್ತೆ ಮೂರನೆಯದು ಡಿಫಾಸಿಟ್ ರೈಸ್ ಮಾಡಿರುವುದು ಮೂರು ತಿಂಗಳ ಡಿಫಾಸಿಟ್ ಕನ್‌ಸ್ಯೂಮರ್ಸ್ ಹಾಗೂ ಇಂಡಸ್ಟ್ರೀಸ್‌ಗೆ ಏನು ತೆಗೆದುಕೊಳ್ಳುತ್ತಿದ್ದಾರೆ. ಅದು ಸರಿಯಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತೇವೆಂದು ಹೇಳಿದರು. ದಯವಿಟ್ಟು ಮಧ್ಯಾಹ್ನ ತಾವು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಮಿತಿಯು ವರದಿ ನೀಡಲು ಕಾಲಾವಧಿ ವಿಸ್ತರಣೆ

ವಿಷಯಃ ರಾಯಚೂರು ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆಯ ಮೇಲೆ ನಡೆಸಲಾದ ಅತ್ಯಾಚಾರ ಪ್ರಕರಣದ ಬಗ್ಗೆ ಸದನದ ಸಮಿತಿಯು ವರದಿ ನೀಡಲು ಕಾಲಾವಕಾಶ ವಿಸ್ತರಿಸುವ ಬಗ್ಗೆ.

ಶ್ರೀ ಅಬ್ದುಲ್ ಹಕೀಮ್ ಮಹಮದ್‌ಗೌಸ್ ಹಿಂಡಸಗೇರಿ: ಸನ್ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆಯ ಮೇಲೆ ನಡೆಸಲಾದ ಅತ್ಯಾಚಾರ ಪ್ರಕರಣದ ಸತ್ಯಾಸತ್ಯತೆಯ ಪರಿಶೀನೆಗಾಗಿ ರಚಿಸಲಾದ ಜಾಯಿಂಟ್ ಸದನ ಸಮಿತಿಯ ವರದಿಯನ್ನು ಒಪ್ಪಿಸಲು ಮತ್ತೆ ಈ ತಿಂಗಳ ಅಂತಿಮದವರೆಗೆ ಕಾಲವನ್ನು ವಿಸ್ತರಿಸಬೇಕೆಂದು ಕೋರುತ್ತೇನೆ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ರಾಯಚೂರು ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆಯ ಮೇಲೆ ನಡೆಸಲಾದ ಅತ್ಯಾಚಾರ ಪ್ರಕರಣದ

ಸತ್ಯಾಸತ್ಯತೆಯ ಪರಿಶೀನೆಗಾಗಿ ರಚಿಸಲಾದ ಜಾಯಿಂಟ್ ಸದನ ಸಮಿತಿಯ ವರದಿಯನ್ನು ಒಪ್ಪಿಸಲು ಈ ತಿಂಗಳ ಅಂತಿಮದವರೆಗೆ ಕಾಲವನ್ನು ವಿಸ್ತರಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಕಾಲವನ್ನು ವಿಸ್ತರಿಸಲಾಯಿತು)

ಅಧ್ಯಕ್ಷರು : ಈಗ ಸಭೆಯನ್ನು ಮಧ್ಯಾಹ್ನ 2.30ರವರೆಗೆ ಮುಂದೂಡಿದ್ದೇನೆ.

(ಸದನವು ಮಧ್ಯಾಹ್ನ 1.00ಗಂಟೆ 00.02ನಿಮಿಷಕ್ಕೆ ಮುಂದೂಡಲ್ಪಟ್ಟಿತು)

(ಸದನವು 2ಗಂಟೆ 55ನಿಮಿಷಕ್ಕೆ ಸಮಾವೇಶಗೊಂಡಿತು)

(ಶ್ರೀ ಅಂಜನಾಮೂರ್ತಿ (ಉಪಾಧ್ಯಕ್ಷರು) ಅಧ್ಯಕ್ಷಪೀಠವನ್ನು ಅಲಂಕರಿಸಿದರು.)

ಉಪಾಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯ.

ವಿಷಯ : ರೈತರ ಬೆಳೆಗೆ ಸರಿಯೂದ ಬೆಲೆ ಸಿಗದಿರುವ ಹಾಗೂ ಕೃಷಿ ವಸ್ತುಗಳ ಬೆಲೆ ಹೆಚ್ಚಿರುವ ಬಗ್ಗೆ.

*ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೇ, ನಾನು ಅತ್ಯಂತ ಮಹತ್ತರವಾದಂಥ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಬೆಳಿಗ್ಗೆ ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದ್ದೆ. ಅವರು ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದರು. ತಮ್ಮನ್ನೂ ಕೂಡ ವಿನಂತಿಸಿದ್ದೆ, ತಾವು ಕೂಡ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದರು. ತಮ್ಮನ್ನೂ ಕೂಡ ವಿನಂತಿಸಿದ್ದೆ, ತಾವು ಕೂಡ ಅವಕಾಶ ಮಾಡಿಕೊಡುತ್ತೇನೆನ್ನುವ ಭರವಸೆಯನ್ನು ಕೊಟ್ಟಿದ್ದಿರಿ. ಮಾನ್ಯ ಅಧ್ಯಕ್ಷರೇ,ಈ ಸದನದಲ್ಲಿ ಕಳೆದ ಒಂದೂವರೆ ತಿಂಗಳಿಂದ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಆದರೆ ಅತಿ ಮುಖ್ಯವಾದಂಥ ವಿಚಾರ ಅಂದರೆ ಇಂದು ವ್ಯವಸಾಯಗಾರನ, ರೈತನ ಪರಿಸ್ಥಿತಿ ಬಗ್ಗೆ ಇಲ್ಲಿ ಹೆಚ್ಚಿಗೆ ಪ್ರಸ್ತಾಪ ಮಾಡಲು ಅವಕಾಶ ಸಿಗಲಿಲ್ಲ. ಕಾರಣವೇನೆಂದರೆ ಆ ಸಂಬಂಧಪಟ್ಟ ಇಲಾಖೆಗಳ ನಾವು ಬೇಡಿಕೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸತಕ್ಕಂಥ ಒಂದು ಅವಕಾಶ ಸಿಗಲಿಲ್ಲ. ಆದ್ದರಿಂದ ಇವತ್ತಿನದಿವಸ ವಿಶೇಷವಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ನಿಂತಿದ್ದೇನೆ. ಇವತ್ತು ನನ್ನ ಮನಸ್ಸಿಗೆ ಒಂದು ತರಹ ಜಿಗುಪ್ಸೆ, ನೋವನ್ನು ತಂದ ವಿಚಾರವೆಂದರೆ ಬೆಳಿಗ್ಗೆಯಿಂದ ಹಾವೂ ಮತ್ತು ಮುಂಗೂಸಿಯ ಜಗಳವನ್ನು ಚೆನ್ನಾಗಿ ನಾವು ನೊಡಿದ್ದೇವೆ. ಹಾವು ಮತ್ತು ಮುಂಗೂಸಿ ಜಗಳಕ್ಕೆ ಹೆಚ್ಚಿನ ಪ್ರಾಶಸ್ತ್ಯ ಇಲ್ಲಿ ಸಿಗುತ್ತದೆ; ಆದರೆ ರೈತರ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಹೆಚ್ಚಿನ ಅವಕಾಶವಾಗಲಿ, ಪ್ರಾಶಸ್ತ್ಯವಾಗಲಿ ಸಿಗುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ರೈತನ ಪರಿಸ್ಥಿತಿ ಏನಾಗಿದೆ ಎನ್ನುವುದಕ್ಕೆ ನನ್ನ ಹತ್ತಿರ ಈ ಅಧಿಕೃತವಾದ ಅಂಕಿಅಂಶಗಳು ಇವೆ. ಅಗ್ರಿಕಲ್ಚರ್ ಮಾರ್ಕೆಟಿಂಗ್ ಡೈರೆಕ್ಟರ್ ಅವರಿಂದ ತರಿಸಿರತಕ್ಕಂಥ ಮಾಹಿತಿ ಇದೆ. ಇವತ್ತು ರೈತ ನೂರೆಂಟು